
# ಪೋಸ್ಟ್‌ಮನ್ ಭಯ

**ಲೋಕದೆಲ್ಲೆಡೆಯ** ಜೈಲುವಾಸಿಗಳೇ...
ನೀವು ಕಂಡ ಭೀಕರತೆ, ಬೇಸರವ
ನನಗೆ ಬರೆದು ಕಳುಹಿಸಿರಿ

ಸಮುದ್ರ ತೀರದಲ್ಲಿನ ಮೀನುಗಾರರೇ...
ಬರಿದಾದ ಬಲೆಗಳು, ನೀರಿನ ಸುಳಿವುಗಳ ಕುರಿತು
ನನಗೆ ಬರೆದು ಕಳುಹಿಸಿರಿ

ಎಲ್ಲಾ ಭೂಮಿಯ ಕೃಷಿಕರೇ...
ನಿಮ್ಮಲ್ಲಿಯ ಹೂಗಳು, ಚಿಂದಿ ಬಟ್ಟೆಗಳು,
ಛಿದ್ರ ವೃಕ್ಷಗಳು,
ನುಸುಳಿದ ಹೊಟ್ಟೆಗಳು,
ಕಿತ್ತುಹೋದ ಬೆರಳುಗಳೆಲ್ಲದರ ಕುರಿತು
ವಿಶ್ವದೆಲ್ಲೆಡೆಯ ಕೇರಿಯಲ್ಲಿನ,
ಕಫೆಯಲ್ಲಿಯ,
ನನ್ನ ವಿಳಾಸಕ್ಕೆ ಕಳುಹಿಸಿ

ಮನುಷ್ಯ ದುರಂತದ ಬೃಹತ್ ಫೈಲನು
ನಾ ತಯಾರುಮಾಡುತ್ತಿರುವೆ
ಹಸಿದವನ ತುಟಿಗಳಿಂದ,
ಕಾದುಕುಳಿತವನ ಕಣ್ಣ ಹೊಳಪಿನಿಂದ
ಸಹಿ ಹಾಕಿದಲ್ಲಿ,
ದೇವರಿಗೆ ಸಮರ್ಪಿಸುವೆನು
ಆದರೆ,
ಲೋಕದೆಲ್ಲೆಡೆಯ ದುಃಖಿತರೇ...
ನನಗೊಂದು ಭಯವಿದೆ–
ದೇವರು ನಿರಕ್ಷರನಾಗಿದ್ದಾನೆ.



**ಅರಬ್ಬಿ ಮೂಲ:**
**ಮುಹಮ್ಮದ್-ಅಲ್-ಮಾಗುತ್**
**ಕನ್ನಡಕ್ಕೆ:**
**ಎಂ.ಎ. ಮುಜೀಬ್ ಅಹ್ಮದ್**